

ಎಡದಿಂದ ಬಲಕ್ಕೆ:

1. ಅಭಾವವನ್ನೆದುರಿಸುವಲ್ಲಿ ತುಂಬ ಪರಿಶ್ರಮ (4)
3. ಸವಕಲನ್ನೆಲ್ಲ ದೂರ ಮಾಡಿ ಭಾರೀ ಸಂತಸ (3)
4. ಕೋಡುಗಳನ್ನು ಕಂಡೊಡನೆ ಗಡ ಗಡ (3)
6. ಆಕಾಶವನ್ನು ವೀಕ್ಷಿಸಲು ಒಂದು ಸಂದರ್ಭ (4)
7. 'ನೀರ ಮೇಲಿನ ಬರೆಹ'– ಖಂಡಿತ ಅಶಾಶ್ವತ, ಕ್ಷಣಿಕ (4)
9. ಕಾರು ತರುವ ಕುರಿತು ಆಕ್ಷೇಪ (4)
12. ನಾರದನ ಮುಂದೆ ಮನ್ಮಥನ ಶತ್ರು (4)
14. ಆತಂಕವನ್ನು ಹೋಗಲಾಡಿಸುವವರೆಗೂ... (3)
15. ಹೊರಕ್ಕೆ ಬರಲೇ ಹೆದರುವ ಹೇಡಿ (3)
16. ಮುತ್ತು ಹವಳಗಳ ಆಕರ–ಸಾಗರ ತಾನೇ? (4)

ಮೇಲಿಂದ ಕೆಳಕ್ಕೆ:

1. ಆ ದೃಶ್ಯ, ಅಬ್ಬ! ಅದಕ್ಕೆ ಹೋಲಿಕೆಯೇ ಇಲ್ಲ (4)
2. ವಜ್ರವನ್ನೇನೂ ಬಯಸಲಿಲ್ಲ ಬಿಡಿ ಕಾಡಿನ ಅರಸ (4)
3. ಎಂಥ ಉಪದ್ರವ! ತಂತಾನೇ ಹುಟ್ಟಿತು ನೋಡಿ (3)
5. ಪಕ್ಕದಲ್ಲಿಯೇ ಪ್ರತ್ಯಕ್ಷನಾದ, ಈಶ್ವರ (3)
6. ಅಂಬಿಗನಂತೆ ಆತ. ಕರೆಯದೇ ಬಂದನಲ್ಲ? (4)
8. ನಾರಿ ಶಪಿಸಿದರೂ ಸರಿ, ಅವನು ಮಹಾ ಜಿಪುಣ (4)
10. ಕಪ್ಪಾಗಿ ಬಿಟ್ಟಿತಲ್ಲ, ಪಾರಿವಾಳ! (3)
11. ಕುರ್ಚಿಯ ಕೈಯಲ್ಲಿ ಸಿಕ್ಕಿದ್ದು ನಾಲಿಗೆಗೆ ತುಂಬ ಹಿತ (4)
12. ಮರಹತ್ತಿನೋಡಿದರೆ ಕಂಡ ದೃಶ್ಯ ಚಿತ್ತಾಕರ್ಷಕ (4)
13. ಕನಸಿನಲ್ಲಿ ಕಂಡದ್ದು ಅದೇ ಮೂಗು (3)

## ಪದಬಂಧ 22-09-2011ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅವಾಂತರ; 3. ಚಾರಣ; 4. ಜಾನಕಿ; 6. ಪರಿಕರ; 8. ಪರಕೀಯ; 10. ನವೋದಯ; 12. ಸಹಮತ; 16. ಯಜನ;17. ಮಸುಕು; 18. ಕನಿಕರ.

ಮೇಲಿಂದ ಕೆಳಕ್ಕೆ:

1. ಅಣಕ; 2. ರಜಾಯಿ; 3. ಚಾಲಕ; 5. ಕಿಶೋರ; 6. ಪಲಾಯನ; 7. ರತ್ನತ್ರಯ; 8. ಪರಿಹಾಸ; 9. ಯಥೋಚಿತ; 11. ದಡಿಯ; 13. ಹರುಕು; 14. ಪಾನಕ; 15. ಡಾಮರ.

# ಮನುಷ್ಯ ವಿಶೇಷ

## 'ಆರ್ಡಿ'–ಅದು ಯಾರು?

'ಆರ್ಡಿ'– ಅದು ಒಂದು ಪೂರ್ವಮಾನವ ಪ್ರಭೇದ. 'ಆರ್ಡಿಪಿತೀಕಸ್ ರ‍್ಯಾಮಿಡಸ್' ಎಂಬ ಆ ಪ್ರಭೇದ ನಾಮದ ಹ್ರಸ್ವ ರೂಪ 'ಆರ್ಡಿ.' ಅತ್ಯಂತ ಇತ್ತೀಚೆಗೆ ನಿರ್ಧಾರವಾಗುರುವಂತೆ ಈ ಪ್ರಭೇದವೇ 'ಹೋಮೋ ಸೇಪಿಯನ್'ರ ಎಂದರೆ ಆಧುನಿಕ ಮಾನವರ ಹಾಗೆಂದರೆ ನಮ್ಮೆಲ್ಲರ ಅತ್ಯಂತ ಪುರಾತನ ಮೂಲ ಪಿತಾಮಹ.

ಧರೆಯ ಮಾನವ ವಂಶಾವಳಿಯ ಮೂಲ ಮಾತಾಮಹ– ಪಿತಾಮಹದ ಪತ್ತೆಯ ಅತ್ಯಂತ ಕುತೂಹಲದ, ಆಸಕ್ತಿದಾಯಕವಾದ ಶೋಧ ಬಹುಕಾಲದಿಂದ ನಡೆಯುತ್ತಲೇ ಬಂದಿದೆ. ಪ್ರಾಚೀನ ಮಾನವರ ವಿಧ ವಿಧ ಪ್ರಭೇದಗಳ ಹೇರಳ ಅವಶೇಷಗಳು ಪತ್ತೆಯಾಗಿವೆ ಕೂಡ. ಹಾಗೆ ಲಭಿಸಿರುವ ಅವಶೇಷಗಳನ್ನು ಅಭ್ಯಸಿಸಿ, ಬೇರೆ ಬೇರೆ ಪ್ರಭೇದಗಳನ್ನಾಗಿ ವರ್ಗೀಕರಿಸಿ, ಹೆಸರಿಸಿ, ಅವುಗಳ ಕಾಲ, ನೆಲೆ, ಜೀವನಕ್ರಮ ಇತ್ಯಾದಿ ವಿವರಗಳನ್ನೆಲ್ಲ ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಅಂಥ ಕೆಲ ಪ್ರಮುಖ ಪ್ರಭೇದಗಳು: 'ಅಸ್ಟ್ರಲೋಪಿತೀಕಸ್ ಅನಮೆನ್ಸಿಸ್, ಅಸ್ಟ್ರಲೋಪಿತೀಕಸ್ ಅಫರೆನ್ಸಿಸ್, ಅಸ್ಟ್ರಲೋಪಿತೀಕಸ್ ಆಫ್ರಿಕಾನಸ್, ಅಸ್ಟ್ರಲೋಪಿತೀಕಸ್ ರೋಬಸ್ಟಸ್, ಹೋಮೋ ನಿಯಾಂಡರ್‌ಥಾಲೆನ್ಸಿಸ್, ಹೋಮೋ ರುಡೋಲ್ಫೆನ್ಸಿಸ್,



ಹೋಮೋ ಎರ್ಗಾಸ್ಟರ್, ಹೋಮೋ ಹ್ಯಾಬಿಲಿಸ್, ಹೋಮೋ ಇರೆಕ್ಟಸ್...' ಹೋಮಿನಿನ್ಸ್ ಅಥವಾ ಹೋಮಿನಿಡ್ಸ್ ಎಂದೇ ಈ ಎಲ್ಲ ಪ್ರಭೇದಗಳೂ ಪ್ರಸಿದ್ಧ.

ಹೋಮಿನಿನ್‌ಗಳ ವಿಶಿಷ್ಟ ನಿರ್ಣಾಯಕ ಲಕ್ಷಣ 'ದ್ವಿಪಾದಿತ್ವ' ಎಂದರೆ ಎರಡೇ ಪಾದಗಳ ಮೇಲೆ ನೇರವಾಗಿ ನಿಲ್ಲಬಲ್ಲ, ಸೊಂಟವನ್ನು ತೂಗಾಡಿಸದೆ ನಡೆಯಬಲ್ಲ ಸಾಮರ್ಥ್ಯ. ವಾನರರಿಂದ ಹೋಮಿನಿನ್ ಗಳನ್ನು ಪ್ರತ್ಯೇಕಿಸುವ ಪ್ರಮುಖ ಶಾರೀರಿಕ ಲಕ್ಷಣ ಇದೇ. ದ್ವಿಪಾದಿತ್ವ ಪಡೆದು, ನಡೆದಾಟದಿಂದ ಕೈಗಳನ್ನು ಮುಕ್ತವಾಗಿಸಿಕೊಂಡಿದ್ದೇ ಹೋಮಿನಿನ್‌ಗಳ ಉಳಿದೆಲ್ಲ ವಿಶಿಷ್ಟತೆಗಳಿಗೆ ಮೂಲ ಆಕರ.

ಆಫ್ರಿಕಾ ಖಂಡದ, ಎಥಿಯೋಪಿಯಾ ದೇಶದ, 'ಮಿಡ್ಲ್ ಅವಾಶ್' ಪ್ರದೇಶದಲ್ಲಿ ಪ್ರಥಮವಾಗಿ 1995 ರಲ್ಲಿ 'ಆರ್ಡಿ'ಯ ಅವಶೇಷ ಲಭಿಸಿ ಇತ್ತೀಚೆಗಷ್ಟೇ ಅದರ ದ್ವಿಪಾದಿತ್ವ ನಿಚ್ಚಳವಾಯಿತು. ದ್ವಿಪಾದಿ ಆಗಿದ್ದು ವೃಕ್ಷವಾಸಕ್ಕೂ ಸಮರ್ಥವಾಗಿದ್ದ 'ಆರ್ಡಿ' ಆಫ್ರಿಕದಲ್ಲಿದ್ದದ್ದು ಈಗ್ಗೆ ನಲವತ್ತಾಲ್ಕು ಲಕ್ಷ ವರ್ಷ ಹಿಂದೆ. ಮಂಗಗಳ, ವಾನರರ ಮತ್ತು ಪೂರ್ವ ಮಾನವರ ಲಕ್ಷಣಗಳು ದೇಹ ಸಾಮರ್ಥ್ಯಗಳು ಬೆರೆತಂತಿದ್ದ ಆರ್ಡಿಯ ಶರೀರ ವಿನ್ಯಾಸವನ್ನು– ವಿಶೇಷವಾಗಿ ಅದರ ನೇರ ನಿಲುವನ್ನು, ಹಸ್ತ–ಪಾದಗಳನ್ನು ಬೆರಳುಗಳನ್ನು–ಚಿತ್ರದಲ್ಲಿ ಗಮನಿಸಿ. ಇದೇ ಪ್ರಭೇದವೇ ಈ ವರೆಗೆ ಪತ್ತೆಯಾಗಿರುವ ಇಡೀ ಮಾನವ ಸಂಕುಲದ ಆದ್ಯ ಪ್ರಭೇದ. ಅದೇ ನಮ್ಮೆಲ್ಲರ ಮೂಲ ಪಿತಾಮಹ.

■ ಎನ್. ವಾಸುದೇವ್